ಗ್ರಾಮಗಳಾಗಿ ಪರಿವರ್ತಿಸುವ ಪ್ರಸ್ತಾವನೆಯನ್ನು ಸಧ್ಯಕ್ಕೆ ಪರಿಗಣಿಸಲು ಸಾಧ್ಯವಿರುವುದಿಲ್ಲ. ಈ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡುವವರೆಗೆ ಎಲ್ಲಾ ಲಂಬಾಣಿ ತಾಂಡಾಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಆದ್ಯತೆಯ ಮೇರೆಗೆ ಕೈಗೊಳ್ಳಲು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಎಲ್ಲಾ ಜಿಲ್ಲಾ ಪರಿಷತ್‌ಗಳಿಗೆ ಸೂಚನೆ ನೀಡಲಾಗಿದೆ. ಇದಲ್ಲದೆ ಈಗಾಗಲೇ ಎಲ್ಲ ಜಿಲ್ಲಾಧಿಕಾರಿಗಳಿಗೂ ಸಹಿತ ಲಂಬಾಣಿ ತಾಂಡಾಗಳು ಎಲ್ಲೆಲ್ಲಿ ಇವೆಯೋ ಅವುಗಳನ್ನು ಗ್ರಾಮಗಳನ್ನಾಗಿ ಪರಿವರ್ತಿಸುವ ಬಗ್ಗೆ ಸಲಹೆ ಮತ್ತು ಸೂಚನೆಗಳನ್ನು ಕೊಡಬೇಕೆಂದು ನಾನು ಕೇಳಿದ್ದೇನೆ. ಅವರಿಂದ ವಿವರಗಳು ಬಂದ ನಂತರ ಮಾರ್ಚ್ ೯೧ರ ಒಳಗಾಗಿ ಎಲ್ಲವನ್ನೂ ತಯಾರಾಗಿಟ್ಟು, ಆದಾ ಆದಷ್ಟೂ ಪರಿವರ್ತನೆಯ ನೋಟಿಫಿಕೇಷನ್ ಮಾಡಲಿಕ್ಕೆ ಅನುಕೂಲವಾಗುತ್ತದೆ.

ಶ್ರೀ ಕೆ. ಶಿವಮೂರ್ತಿ.— ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಎಲ್ಲಾ ಜಿಲ್ಲಾ ಪರಿಷತ್‌ಗಳಿಗೆ ಸೂಚನೆ ನೀಡಲಾಗಿದೆ ಎಂದು ಹೇಳಿದ್ದಾರೆ. ಆದರೆ ಅವರು ಯಾವುದೇ ಕ್ರಮ ತೆಗೆದುಕೊಂಡಿಲ್ಲ.

ಅಧ್ಯಕ್ಷರು.— ನಿಯಮ ೩೩ಳಿರ ಮೇರೆಗೆ ಬಹಳ ಸೀಮಿತವಾಗಿ ವಿಷಯ ಇಲ್ಲಿ ಪ್ರಸ್ತಾಪವಾಗಬೇಕು.

3) ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಅರೆಕಾಲಿಕ ಉಪನ್ಯಾಸಕರ ಸೇವೆಯನ್ನು ರೆಗ್ಯುಲರೈಸ್ ಮಾಡಲು ಒತ್ತಾಯ:

ಶ್ರೀ ಡಿ. ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು).—ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಅರೆಕಾಲಿಕ ಉಪನ್ಯಾಸಕರಾಗಿ ಸೇವೆಸಲ್ಲಿಸುತ್ತಿರುವವರನ್ನು ೧೯೯೦—೯೧ರ ಶೈಕ್ಷಣಿಕ ವರ್ಷದಲ್ಲಿ ಮುಂದುವರೆಸುತ್ತೇವೆ ಎಂಬ ಆಶ್ವಾಸನೆಯನ್ನು ಕೊಟ್ಟಿದ್ದು ಉಂಟು. ಆದರೆ ೪-೫-೯೧ರ ತಮ್ಮ ಸುತ್ತೋಲೆ ಪ್ರಕಾರ ಇವರನ್ನು ಮುಂದುವರೆಸುವುದು ಸಾಧ್ಯವಿಲ್ಲವೆಂದು ಹೇಳಿದ್ದೀರಿ. ಇದರಲ್ಲಿ ನ್ಯಾಯಾಲಯದಿಂದ ತಡೆಯಾಜ್ಞೆಯನ್ನು ತಂದಿರುವವರನ್ನು ಮಾತ್ರ ಸೇವೆಯಲ್ಲಿ ಮುಂದುವರೆಸಬೇಕೆಂದು ತಿಳಿಸಿದ್ದೀರಿ. ಅಂದರೆ ನ್ಯಾಯಾಲಯಕ್ಕೆ ಹೋದವರಿಗೆ ಮಾತ್ರ ರಕ್ಷಣೆ ಸಿಗುತ್ತದೆ. ಹೋಗದಿದ್ದರೆ ಒಂದು ದೊಡ್ಡ ಅಪರಾಧ ಆಗುತ್ತದೆ ಎಂಬ ಅರ್ಥ ಬರುತ್ತದೆ. ಇವರುಗಳನ್ನು ಸೇವೆಯಲ್ಲಿ ಮುಂದುವರೆಸುವ ಬಗ್ಗೆ ಈ ರೀತಿ ದ್ವಂದ್ವ ನಿಲುವನ್ನು ತಳೆಯದೆ ಒಂದು ನಿರ್ದಿಷ್ಟವಾದ ನಿಲುವನ್ನು ತಳೆಯಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ನೀಡುತ್ತೇನೆ.—

ಕಾಲೇಜು ಶಿಕ್ಷಣ ಇಲಾಖೆಯಲ್ಲಿ ೧೯೮೮-೮೯ರ ಅವಧಿಯಲ್ಲಿ ೧೧೭೫ ಅರೆಕಾಲಿಕ ಉಪನ್ಯಾಸಕರಿದ್ದರು. ಅವರಿಗೆ ತಿಂಗಳೊಂದಕ್ಕೆ ರೂ. ೬೦೦ನ್ನು ಅರೆಕಾಲಿಕ ಭತ್ಯೆಯನ್ನು ಕ್ರಮವಾಗಿ ಒಂದು ಗಂಟೆಯ ಬೋಧನಾ ಕಾರ್ಯಭಾರಕ್ಕೆ ರೂ. ೭೫ ರಂತೆ ಪಾಸಿಗೂ ಪ್ರಾಯೋಗಿಕ ಕಾರ್ಯಭಾರಕ್ಕೆ ರೂ. ೫೦ರಂತೆ ನೀಡಲಾಗುತ್ತಿತ್ತು. ಪ್ರತಿ ಶೈಕ್ಷಣಿಕ ವರ್ಷದ ಕೊನೆಯಲ್ಲಿ ಅಥವಾ ನಿಯತ ಉಪನ್ಯಾಸಕರನ್ನು ತೆನಾತಿ ಮಾಡುವವರೆಗೆ ಈ ಅರೆಕಾಲಿಕ ಉಪನ್ಯಾಸಕರ ಸೇವೆಯನ್ನು ಮುಕ್ತಾಯಗೊಳಿಸಲಾಗುತ್ತಿದೆ.

೨) ರಾಜ್ಯ ಆಡಳಿತ ನ್ಯಾಯ ಮಂಡಳಿಯಲ್ಲಿ ಕೆಲವು ಅರೆಕಾಲಿಕ ಉಪನ್ಯಾಸಕರು ತಮ್ಮ ಸೇವೆಯನ್ನು ಸಕ್ರಮಗೊಳಿಸಲು ಮತ್ತು ಉಪನ್ಯಾಸಕರ ವೇತನ ಶ್ರೇಣಿ ನೀಡಬೇಕೆಂದು ಕೋರಿ ಅರ್ಜಿಗಳನ್ನು ಸಲ್ಲಿಸಿದ್ದರು.

೩) ರಿಟ್ ಅರ್ಜಿ ಸಂಖ್ಯೆ, ೧೩೬೭ ಆ/೮೯ ಮತ್ತು ಇತರೆ ಸಂಬಂಧಿಸಿದ ಅರ್ಜಿಗಳಲ್ಲಿ ರಾಜ್ಯ ಆಡಳಿತ ನ್ಯಾಯ ಮಂಡಳಿಯು ತನ್ನ ತೀರ್ಪಿನಲ್ಲಿ ಅರ್ಜಿದಾರರಿಗೆ ಯಾವುದೇ ಪರಿಹಾರವನ್ನು ನೀಡಿಲ್ಲ.

೪) ಇದರಿಂದ ನೊಂದ ೫೧೦ ಅರೆಕಾಲಿಕ ಉಪನ್ಯಾಸಕರು ಸುಪ್ರೀಂ ಕೋರ್ಟಿನಲ್ಲಿ ರಿಟ್ ಅರ್ಜಿ ಸಂಖ್ಯೆ ೫೧೩. ೯೧ನ್ನು ಒಟ್ಟಾಗಿ ಸಲ್ಲಿಸಿದ್ದಾರೆ. ಸುಪ್ರೀಂ ಕೋರ್ಟು ದಿನಾಂಕ ೩೦-೪-೯೧ರ ತನ್ನ ಮಧ್ಯಂತರ ಆಜ್ಞೆಯಲ್ಲಿ ಸದರಿ ಅರೆಕಾಲಿಕ ಉಪನ್ಯಾಸಕರನ್ನು ಸೇವೆಯಿಂದ ತೆಗೆಯು ಹಾಕುವ ಬಗ್ಗೆ ಇರುವ ಯಥಾಸ್ಥಿತಿಯನ್ನೇ ಮುಂದುವರೆಸಬೇಕೆಂದು ಆದೇಶಿಸಿದೆ.

೫) ಅದರಂತೆ, ಸುಪ್ರೀಂ ಕೋರ್ಟಿನ ಆದೇಶ ದಿನಾಂಕ ೩೦-೪-೯೦ ಅನ್ವಯವಾಗುವ ಆರೆಕಾಲಿಕ ಉಪನ್ಯಾಸಕರನ್ನು ಮತ್ತು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ, ಉಚ್ಚನ್ಯಾಯಾಲಯದಲ್ಲಿ ಇನ್ನೂ ಇತ್ಯರ್ಥವಾಗದೆ ಉಳಿದಿರುವ ಅರ್ಜಿಗಳಿಗೆ ಸಂಬಂಧಿಸಿದ ೧೫ ಆರೆಕಾಲಿಕ ಉಪನ್ಯಾಸಕರ ಸೇವೆಯನ್ನು ಮುಂದುವರೆಸಲ್ಲಾಗುತ್ತಿದೆ. ಉಳಿದ ಆರೆಕಾಲಿಕ ಉಪನ್ಯಾಸಕರನ್ನು ಸೇವೆಯಿಂದ ಬಿಡುಗಡೆ ಮಾಡಲಾಗುತ್ತಿದೆ.

ಅಧ್ಯಕ್ಷರು.—ಶ್ರೀ ಪೆರಿಕಲ್ ಎಂ. ಮಲ್ಲಪ್ಪ ಅವರ ಸೂಚನೆಗೆ ಸಂಬಂಧಪಟ್ಟಂತೆ ಮಾನ್ಯ ಮಂತ್ರಿಗಳು ಸಮಯ ಕೇಳಿದ್ದಾರೆ. ಆದ್ದರಿಂದ ಇದನ್ನು ಇನ್ನೊಂದು ದಿವಸ ತೆಗೆದುಕೊಳ್ಳುತ್ತೇನೆ.

4) ಮಡಿಕೇರಿ ತಾಲ್ಲೂಕು ಕರಿಕೆ ಗ್ರಾಮದ ನಾರಾಯಣ ಭಟ್ಟರು ತಮ್ಮ ಜಮೀನಿನಲ್ಲಿದ ಮರಗಳನ್ನು ಕಡಿಯದಂತೆ ಅರಣ್ಯ ಉಪ ಸಂರಕ್ಷಣಾಧಿಕಾರಿಗಳಿಂದ ತಡೆ

ಶ್ರೀ ಕುಶಾಲ ಕೆ.—ಅಧ್ಯಕ್ಷರೇ, ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕಿನ ಕರಿಕೆ ಗ್ರಾಮದ ಶ್ರೀ ನಾರಾಯಣ ಭಟ್ ಎಂಬವರು ಕಳೆದ ಒಂದು ವರ್ಷದ ಅವಧಿಯಿಂದ ತಮ್ಮ ವಾಸಕ್ಕಾಗಿ ಜಮೀನಿಗೆ ಬರುವ ಪುಂಜ ಸ್ಥಳದಲ್ಲಿನ ಕಾಡುಕಟ್ಟಿಗೆಯನ್ನು ಕಡಿಯಲು ಪರವಾನಿಗೆ ಅಪೇಕ್ಷಿಸಿ ಅರ್ಜಿ ಬರೆಕೊಂಡಿದ್ದರು, ಇಷ್ಟು ಸಮಯವಾದರೂ ಕಂದಾಯ ಇಲಾಖೆಯಿಂದ ಪರವಾನಿಗೆ ನೀಡದೆ ಕಟ್ಟಿಗೆಯನ್ನು ತೆಗೆದು ಭೂಮಿಯನ್ನು ಕೃಷಿಗೆ ಅಳವಡಿಸಲು ತುಂಬಾ ತೊಂದರೆ ಮತ್ತು ವಿಳಂಬವಾಗಿರುತ್ತದೆ. ಇದೇ ಮುಂಗಾರಿನಿಸಲ್ಲಿ ಕೃಷಿಗೆ ಭೂಮಿಯನ್ನು ಹಸಿರು ಮಾಡಲು ಅಪೇಕ್ಷಿಸಿ ಕಾಲವ್ಯರ್ಥ ಹಾಗೂ ನಷ್ಟವನ್ನು ಅನುಭವಿಸಬೇಕಾಗಿದೆ. ಕಂದಾಯ ಇಲಾಖೆಯಿಂದ ಈ ಕುರಿತು ವಿಳಂಬವಾದಕ್ಕೆ ಸೂಕ್ತಕ್ರಮ ಕೈಕೊಳ್ಳಲು ಕಡತವನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲು ಕಂದಾಯ ಸಚಿವರು ನಿರ್ಧರಿಸಿದ್ದರೂ ಕಂದಾಯ ಇಲಾಖೆಯ ಕಾರ್ಯದರ್ಶಿಗಳ ಕಚೇರಿಗೆ ಕಡತವನ್ನು ತರಿಸುವಲ್ಲಿ ಕೂತಾ ಅಸಮರ್ಥವಾಗಿವೆ. ಆದುದರಿಂದ ಈ ತೊಂದರೆಯನ್ನು ನಿವಾರಿಸಿ, ಸದ್ರಿ ನಾರಾಯಣ ಭಟ್‌ರವರಿಗೆ ಕೃಷಿಗೆ ಭೂಮಿಯನ್ನು ಉಪಯೋಗಿಸಲು ಕೂಡಲೇ ಕಟ್ಟಿಗೆ ತೆಗೆಯಲು ಪರವಾನಿಗೆ ನೀಡುವಂತೆ ಕ್ರಮ ಕೈಕೊಳ್ಳಬೇಕಾಗಿ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್. (ಕಂದಾಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಕೊಡಗು ಜಿಲ್ಲೆ ಮಡಿಕೇರಿ ತಾಲ್ಲೂಕು ಕರಿಕೆ ಗ್ರಾಮದ ಸರ್ವೆ ನಂ. ೪೫೩.೧, ೪೫೩.೩, ೪೫೩.೪, ೪೫೩.೬, ೪೫೩.೭ ಮತ್ತು ೪೫೪.೯ ರ ಜಮೀನಿನಲ್ಲಿರುವ ಮರಗಳನ್ನು ಕಡಿಯಲು ಜಮೀನಿನ ಮಾಲೀಕರಾದ ಶ್ರೀ ನಾರಾಯಣ ಭಟ್‌ರವರು ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಡಿಕೇರಿ ಇವರಿಗೆ ಅರ್ಜಿ ಬರೆದುಕೊಂಡಿದ್ದರು, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಕೊಡಗು ಈ ವಿಷಯದಲ್ಲಿ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದಿದ್ದು ಮೇಲ್ಕಂಡ ಜಮೀನಿನ ಮಾಲೀಕರಿಗೆ ಜಾಗದ ವಂತ್ತು ಅದರಲ್ಲಿರುವ ಮರಗಳ ಹಕ್ಕಿನ ಬಗ್ಗೆ ತಿಳಿಸುವಂತೆ ಕೋರಿದ್ದ ಮೇರೆಗೆ ಮಾಲೀಕರಿಗೆ ಜಾಗದ ಮೇಲೆ ಹಾಗೂ ಮರಗಳ ಮೇಲೆ ಹಕ್ಕು ಇದೆ ಎಂದು ಜಿಲ್ಲಾಧಿಕಾರಿಗಳಿಂದ ತಿಳಿಸಿದರು.

ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಡಿಕೇರಿಯವರು ದಿನಾಂಕ ೨೦-೨-೯೦ರ ಪತ್ರದಲ್ಲಿ ಕಾಫಿ ಸಾಗುವಳಿಗಾಗಿ ಕಾದಿರಿಸಿರುವ ಜಮೀನಿನಲ್ಲಿ ರಬ್ಬರ್ ವ್ಯವಸಾಯ ಮಾಡಲಿರುವುದರಿಂದ ಜಮೀನಿನಲ್ಲಿರುವ ಪೂರ್ಣ ಮರಗಳನ್ನು ತೆಗೆಯಬೇಕಾಗಿದೆಯೆಂದು ತಿಳಿಸುತ್ತಾ ಕಂದಾಯ ಇಲಾಖೆಯ ಅಭಿಪ್ರಾಯ ಕೋರಿದ್ದಾರೆ. ಅರ್ಜಿದಾರರ ಕೋರಿಕೆಯನ್ನು ಪರಿಶೀಲಿಸಲು ಮೂಲ ಮಂಜೂರಾತಿಯ ಆದೇಶದ ಪ್ರತಿ ಇತ್ಯಾದಿಗಳನ್ನು ಒದಗಿಸುವಂತೆ ಕೊಡಗು ಜಿಲ್ಲಾಧಿಕಾರಿಗಳು ದಿನಾಂಕ ೨೩-೩-೯೦ರ ಪತ್ರದಲ್ಲಿ ಅರ್ಜಿದಾರರಿಗೆ ತಿಳಿಸಲಾಗಿ ಅವರು ದಿನಾಂಕ ೨೪-೩-೯೦ರ ಪತ್ರದಲ್ಲಿ ಮಂಜೂರಾತಿಯ ಆದೇಶ ಇಲ್ಲವೆಂದು ತಿಳಿಸಿರುತ್ತಾರೆ.

ಅರ್ಜಿದಾರರು ಸಂಬಂಧಪಟ್ಟ ಸಂಬಂಧಪಟ್ಟ ವಹಿಶಿಯನ್ನು ಪ್ರಾಜರುಪಡಿಸದಿರುವುದರಿಂದ ಸದರಿ ಜಮೀನು ಯಾವ ವ್ಯವಸಾಯಕ್ಕಾಗಿ ಯಾವ ನಿಯಮಗಳ ಪ್ರಕಾರ ಮಂಜೂರು ಮಾಡಲಾಗಿದೆ ಮತ್ತು ಮಂಜೂರಾತಿಯ ಷರತ್ತುಗಳು ಏನು ಎಂಬ ಬಗ್ಗೆ ದಾಖಲೆ ಲಭ್ಯವಿಲ್ಲದಿರುವುದರಿಂದ ಕಾಫಿ ಸಾಗುವಳಿ ಮೇಲೆಯಲ್ಲಿ ರಬ್ಬರ್ ವ್ಯವಸಾಯ ಮಾಡಬಹುದೆ ಎಂಬ ಬಗ್ಗೆ ಕಂದಾಯ ಇಲಾಖೆಯ ಅಭಿಪ್ರಾಯ ನೀಡಲು ಸಾಧ್ಯವಿಲ್ಲವೆಂದು ಜಿಲ್ಲಾಧಿಕಾರಿಗಳು ದಿನಾಂಕ. ೩-೪-೯೦ರ ಪತ್ರದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಡಿಕೇರಿಯವರಿಗೆ ವರದಿ ಮಾಡಿರುತ್ತಾರೆ.